ಮರದ ಬುಡವನ್ನು ಒದೆಯುತ್ತಾನೆ. 'ಥೂ' ಎಂದು ಅದಕ್ಕೆ ಉಗುಳುತ್ತಾನೆ, ತನ್ನನ್ನು ಈ ಬಲೆಯಿಂದ ಹೇಗಾದರು ಮಾಡಿ ಪಾರು ಮಾಡಮ್ಮ ಸಾದಲಮ್ಮ ಎಂದು ಅಸಹಾಯಕತೆಯಿಂದ ದೇವರನ್ನು ಬೇಡಿಕೊಳ್ಳುತ್ತಾ ಅಲ್ಲೇ ಕುಸಿದು ಕೂತು ಅತ್ತು ಅತ್ತು ಅಲ್ಲೇ ಕಸದಲ್ಲೇ ಮಲಗುತ್ತಾನೆ, ನಿದ್ದೆ ಮಾಡಿರುವುದಿಲ್ಲ. ಸ್ವಲ್ಪ ಹೊತ್ತಾದ ಮೇಲೆ ಏನೊ ನಿರ್ಧರಿಸಿದವನಂತೆ ಎದ್ದು ಕೂರುತ್ತಾನೆ. ಬಿಸಿಲು ಧಗಧಗಿಸ್ತಿರುತ್ತದೆ. ಸುತ್ತಲೂ ಕಣ್ಣಾಯಿಸಿ ಜೋರಾಗಿ ನಿಧಾನವಾಗಿ ಉಸಿರನ್ನು ಎಳೆದುಕೊಂಡು ಅಷ್ಟೆ ನಿಧಾನವಾಗಿ ಉಸಿರನ್ನು ಬಿಡುತ್ತಾನೆ. ಒಂದು ದೃಢ ನಿಶ್ಚಯದಿಂದ ಕಣ್ಣು ಮುಚ್ಚಿಕೊಂಡು ಅಲ್ಲಿಂದ ಹೊರಬೀಳುವ ಮಾರ್ಗ ಯೋಚಿಸುತ್ತಿರಲು ತಂಪಾದ ಗಾಳಿ ಅವನೆಡೆಗೆ ಬಂದು ಅವನನ್ನು ಸೋಕುತ್ತದೆ, ಅಂತಹ ಪರಿಸ್ಥಿತಿಯಲ್ಲಿಯೂ ಅವನಿಗೆ ಹಾಯೆನಿಸುತ್ತದೆ. ಮೆಲ್ಲನೆ ಕಣ್ಣು ಬಿಚ್ಚಿ ಸ್ವಲ್ಪ ಹಿಂದಕ್ಕೆ ಸರಿದು ಆಲದ ಮರದ ಬುಡಕ್ಕೆ ಒರಗಿ ಕೂತು ಒಮ್ಮೆಲೆ ತಲೆಯೆತ್ತಿ ನೋಡುತ್ತಾನೆ, ಬೃಹತ್ತಾದ ಮರ ಅದರ ನೀಳವಾದ ಕೊಂಬೆಗಳು, ಎಷ್ಟೋ ಪ್ರಾಣಿಸಂಕುಲಗಳಿಗೆ ಅದು ಆಶ್ರಯ ನೀಡಿದೆ, ಎಷ್ಟೋ ಪಕ್ಷಿಗಳು, ಅಳಿಲುಗಳು ಅದರ ಹಣ್ಣಿನ ರುಚಿಯನ್ನು ಹೊಗಳದೆ ತಿಂದು ಅದರ ಕೆಳಗೆ ಹಿಕ್ಕೆ ಮಾಡುತ್ತಿವೆ, ಇನ್ನೆಷ್ಟೊ ಹಕ್ಕಿಗಳು ಬಾಡಿಗೆ ಕೊಡದೆ ಗೂಡುಗಳನ್ನು ಕಟ್ಟಿಕೊಂಡಿವೆ, ಕೋತಿಗಳು ಅವುಗಳ ಆಟದ ಮೈದಾನವೆಂದು ತಿಳಿದು ರೆಂಬೆಯಿಂದ ರೆಂಬೆಗೆ ಜಿಗಿಯುತ್ತವೆ, ಬಾವುಲಿಗಳು ನೇತಾಡುತ್ತಿವೆ. ಇವೆಲ್ಲವನ್ನು ನೋಡಿದ ವಿಶ್ವನಿಗೆ ಒಂದು ನಿಮಿಷ ಆ ಆಲದ ಮರ, ಮಕ್ಕಳ ಕೀಟಲೆಯನ್ನು ನಗುಮುಖದಿಂದ ಸಹಿಸುವ ತಾಯಿಯಂತೆ ಕಂಡಿತು. ಈ ಹಿಂದೆ ಅವನ ಕೈಯಲ್ಲೇ ಒದೆ ತಿಂದು, ಉಗಿಸಿಕೊಂಡ ಆಲದ ಮರ ಈಗ ಮಾತೃಸಮಾನಳಾಗಿ ಕಂಡಿತು.



ಮುಗುಳುನಗೆಯೊಂದು ಅವನ ಮುಖದ ಮೇಲೆ ಮೂಡಿತು. ತಲೆ ಕೆಳಗಿಳಿಸಿ ಸುತ್ತಲು ಕಣ್ಣುಹಾಯಿಸಲು ಮರದ ಕೆಳಗೆ ಬಿದ್ದಿದ್ದ ಕಸ ಅವನಿಗೆ ಕಾಣಿಸುತ್ತದೆ. ಮರದ ತರಗೆಲೆ, ಹಕ್ಕಿ ಹಿಕ್ಕೆಗಳು, ಪ್ರಾಣಿಗಳ ಲದ್ದಿ, ಅವರು ಯಾವಾಗಲು ವೀಕೆಂಡ್ ಪಾರ್ಟಿಗೆಂದು ಬಂದು ಕುಡಿದು ಕುಪ್ಪಳಿಸಿ ಬಾಟಲಿಗಳನ್ನು, ಅವುಗಳನ್ನು ತಂದ ಪ್ಲಾಸ್ಟಿಕ್ ಬ್ಯಾಗುಗಳನ್ನು ಅಲ್ಲೇ ಬಿಸಾಡಿ ಹೋಗಿದ್ದರು, ಅವು ಒಂದೆಡೆ ಬಿದ್ದಿರದೆ, ಮಣ್ಣಲ್ಲೂ ಕೊಳೆಯದೆ ಗಾಳಿಗೆ ಅಲ್ಲಲ್ಲಿ ಹಾರಿಕೊಂಡ ಹೋಗಿ ಗಲೀಜಾಗಿ ಕಾಣುತ್ತಿತ್ತು. ಕೆಲವೊಂದು ಗಾಜಿನ ಬಾಟಲಾದರೆ ಒಡೆದು ಹೋಗಿ ಚೂರುಗಳಾಗಿ ತರಗೆಲೆ ಕೆಳಗೆ ಬಚ್ಚಿಕೊಂಡಿದ್ದವು. ಮದ್ಯಪಾನ ಜಾಸ್ತಿಯಾದಾಗ ಅವರು ಕುಡಿದು ಬಾಟಲಿಗಳನ್ನು ಒಡೆದುಹಾಕುತ್ತಿದ್ದುದು ಅವನ ನೆನಪಿಗೆ ಬಂತು. ಇನ್ನು ಊಟ, ನಂಜಿಕೊಳ್ಳುವ ತಿಂಡಿ ತಿನಿಸುಗಳನ್ನು ತಂದು ಅವನ್ನು ಪೂರ್ತಿ ಖಾಲಿ ಮಾಡದೆ ಅರ್ಧಂಬರ್ಧ ತಿಂದು ಅಲ್ಲಿನ ಇರುವೆಗಳಿಗೆ ಬಿಟ್ಟು ಹೋಗಿದ್ದರು. ಯಾವುದೋ ಒಂದು ಭಾರದ ವಸ್ತುವನ್ನು ಹಲವಾರು ಜನ ಹೊತ್ತುಕೊಂಡು ಹೋಗುವಂತೆ ಇರುವೆಗಳ ಸಮೂಹ ತಿಂಡಿಯನ್ನು ಅವುಗಳ ಗೂಡಿಗೆ ಸಾಗಿಸುತ್ತಿದ್ದವು. ಅಲ್ಲಲ್ಲೇ ಸೇದಿ ಬಿಸಾಡಿದ ಸಿಗರೇಟಿನ ಮೋಟುಗಳು ಬಿದ್ದಿದ್ದವು. ಒಟ್ಟಿನಲ್ಲಿ ಇವರು ಇಟ್ಟಿದ್ದ ಹೆಸರಿಗೆ ತಕ್ಕಂತೆ ಅದು ಎಣ್ಣೆ ಮರ ಎಂದು ಕರೆಸಿಕೊಳ್ಳಲು ಎಲ್ಲಾ ಅರ್ಹತೆಗಳನ್ನು ಹೊಂದಿತ್ತು.

ಇವೆಲ್ಲವನ್ನು ಗಮನಿಸಿದ ವಿಶ್ವನಿಗೆ ಮನಸ್ಸಿನಲ್ಲಿ ಯಾಕೊ ಒಂದು ರೀತಿ ಚುಚ್ಚಿದಂತಾಗುತ್ತದೆ. ಅವನು ಎಲ್ಲೋ ಕೇಳಿದ ಮಾತೊಂದು ನೆನಪಾಗುತ್ತದೆ 'ಒಂದು ಪ್ರಾಣಿ ದಾರಿಯಲ್ಲಿ ಹಾದು ಹೋದರೆ ಅದರ ಹೆಜ್ಜೆ ಗುರುತಿನಿಂದ ಅದು ಹಾದು ಹೋಗಿದೆ ಎಂದು ಕಂಡುಹಿಡಿಯಬಹುದು ಆದರೆ ಮನುಷ್ಯ ನಡೆದು ಹೋದರೆ ಅವನ ಹೆಜ್ಜೆ ಗುರುತಿಲ್ಲದೇನೆ ಕಂಡುಹಿಡಿಯಬಹುದು' ಅದರ ಅರ್ಥ ಈಗ ಅವನಿಗೆ ಹೊಳೆಯುತ್ತದೆ.

ಈ ಹಿಂದೆ ಅಲ್ಲಿಂದ ಪಾರಾಗುವುದರ ತಳಮಳ ಈಗ ಅವನಲ್ಲಿ ಇರುವುದಿಲ್ಲ. ಇನ್ನೊಂದು ಬಾರಿ ದಾರಿಯನ್ನು ಹುಡುಕೋಣವೇ? ಎಂದು ಯೋಚನೆ ಬಂದರೂ ಅಲ್ಲಿಂದ ಏಳಲು ಮನಸ್ಸಾಗಲಿಲ್ಲ. ಮರಕ್ಕೆ ಒರಗಿ ಕೂತಿದ್ದವನು ಕಾಲು ಚಾಚಿ ಮತ್ತೆ ಸ್ವಲ್ಪ ಹೊತ್ತು ಕಣ್ಣು ಮುಚ್ಚಿಕೊಂಡು ನಿಟ್ಟುಸಿರು ಬಿಟ್ಟು ಒಲ್ಲದ ಮನಸ್ಸಿನಿಂದ ಎದ್ದು ನಿಂತು ಗಾಡಿ ಬಳಿ ಹೋಗೋಣವೆಂದು ನಾಲ್ಕು ಹೆಜ್ಜೆ ಇಡಲು ಒಂದು ಗಾಜಿನ ಬಾಟಲಿಯ ಚೂರು ಅವನ ಬೂಟಿನ ಕೆಳಗೆ ಸಿಕ್ಕಿ ಇನ್ನೂ ಸಣ್ಣ ಚೂರುಗಳಾಗುತ್ತದೆ. "ಯಾವುದಾದರು ಪ್ರಾಣಿಗಳು ವಿಶ್ರಾಂತಿಗೆಂದು ಬಂದು ಮಲಗಿದರೆ ಏನು ಗತಿ?. ನನಗೆ ಬೂಟುಗಳಿದ್ದಂಗೆ ಅವುಗಳಿಗೆ ರಕ್ಷಾಕವಚಗಳಿರುವುದಿಲ್ಲವಲ್ಲ. ಪಾಪ ಏನೂ ಅರಿಯದ ಜೀವಗಳು" ಎಂದು ವಿಶ್ವ ಯೋಚಿಸುತ್ತಾ ಗಾಡಿ ಇರುವ ದಿಕ್ಕಿಗೆ ಬಿರಬಿರನೆ ನಡೆದು ಹೋಗಿ ಅದರ ಪಕ್ಕದಲ್ಲಿ ಒಂದು ಗಿಡದ ರೆಂಬೆಗಳನ್ನು ಮುರಿದು ಒಂದು ಪೊರಕೆ ಮಾಡಿಕೊಳ್ಳುತ್ತಾನೆ. ತನ್ನ ಎರಡು ಕೈಗಳನ್ನು ಸೊಂಟದ ಮೇಲೆ ಇಟ್ಟುಕೊಂಡು ನಿಂತು "ಎಲ್ಲಿಂದ ಶುರು ಮಾಡೋಣ" ಎಂದು ಹೊರಗೆ ಕೇಳಿಸುವ ಹಾಗೆ ಗೊಣಗುತ್ತಾ ಪೊರಕೆಯನ್ನು ಪಕ್ಕಕ್ಕೆ ಎಸೆದು, ಮೊದಲು ಸುತ್ತಲೂ ಬಿದ್ದೂ ಗಾಳಿಗೆ ನೃತ್ಯ ಮಾಡುತ್ತಾ ಓಡಿಹೋಗಲು ಪ್ರಯತ್ನಿಸಿ ಗಿಡ ಬಳ್ಳಿಗಳ ಕೈಗೆ ಸಿಕ್ಕಿ ಬಂಧನಕ್ಕೊಳಗಾದ ಪ್ಲಾಸ್ಟಿಕ್ ಬ್ಯಾಗುಗಳಿಗೆ ಬಿಡುಗಡೆ ಮಾಡಿ ತನ್ನ ವಶಕ್ಕೆ ಪಡೆದುಕೊಳ್ಳುತ್ತಾನೆ. ಅದರಲ್ಲಿ ಯೋಗ್ಯವಾದವುಗಳನ್ನು ಆರಿಸಿ ಪಕ್ಕಕ್ಕೆ ಇಟ್ಟು, ಹರಿದು ಚಿಂದಿಯಾದವುಗಳನ್ನು ಯೋಗ್ಯವಾದ ಒಂದು ಪ್ಲಾಸ್ಟಿಕ್ ಬ್ಯಾಗಿಗೆ ಹಾಕಿ ತುರುಕಿ ಹೊರಗೆ ಬರದಂತೆ ಗಂಟು ಹಾಕುತ್ತಾನೆ. ಸುತ್ತು ಅವರು ಕುಡಿದು ಎಸೆದಿದ್ದ ಬೀರು, ನೀರಿನ ಬಾಟಲಿಗಳನ್ನು ಆರಿಸಿ ತಂದು ಒಟ್ಟು ಮಾಡಿ ಬಾಟಲಿಗಳೆಲ್ಲವನ್ನು ಸುಮಾರು ಐದಾರು ಬ್ಯಾಗುಗಳಿಗೆ ತುಂಬಿಸುತ್ತಾನೆ. ಬ್ಯಾಗುಗಳು ಕಡಿಮೆಯಿರುವ ಕಾರಣದಿಂದ ನೀರಿನ ಪ್ಲಾಸ್ಟಿಕ್ ಬಾಟಲಿಗಳನ್ನು ತನ್ನ ಬೂಟುಕಾಲಿನಿಂದ ತುಳಿದು ಜಜ್ಜಿ ಮಾಡಿ ಬ್ಯಾಗಿನ ಒಳಗೆ ತುರುಕುತ್ತಾನೆ. ನಂತರ ಗಾಜಿನ ಚೂರುಗಳನ್ನು ಆರಿಸಿ ತಂದು ಒಂದು ಪ್ಲಾಸ್ಟಿಕ್ ಬ್ಯಾಗಿಗೆ ತುಂಬುತ್ತಾನೆ, ಆದರೆ ಚೂರುಗಳು ಚೂಪಾಗಿದ್ದುದರಿಂದ ಪ್ಲಾಸ್ಟಿಕ್ ಬ್ಯಾಗು ತೂತು ಬೀಳುತ್ತದೆ. ವಿಶ್ವ ಏನು ಮಾಡುವುದೆಂದು ಯೋಚಿಸಿ ಅಲ್ಲಲ್ಲಿ ಬಿದ್ದದ್ದ ಕಾಗದ ಪೇಪರುಗಳನ್ನು ಆಯ್ದು ತಂದು ಹರಡಿ ಅದಕ್ಕೆ ಸ್ವಲ್ಪ ಗಾಜಿನ ಚೂರುಗಳನ್ನು ಹಾಕಿ ಪೇಪರನ್ನು ಮಡಚಿ ಉಂಡೆ ಮಾಡಿ ಅದನ್ನು ಒಂದು ಪ್ಲಾಸ್ಟಿಕ್ ಬ್ಯಾಗಿಗೆ ಹಾಕಿ, ಮಿಕ್ಕ ಚೂರುಗಳನ್ನು ಅದೇ ರೀತಿ ಮಾಡಿ ಎರಡು ಬ್ಯಾಗ್ ತುಂಬಿಸುತ್ತಾನೆ.

'ಅಬ್ಬಾ ಅರ್ಧ ಕೆಲಸ ಮುಗೀತು' ಎಂದು ಆಗಲೆ ತಾನು ಪಕ್ಕಕ್ಕೆ ಎಸೆದ ಗಿಡದ ಪೊರಕೆಯನ್ನು ತಂದು ಆಲದ ಮರದ ಬುಡದಿಂದ ತರಗೆಲೆಯನ್ನು ಗುಡಿಸಿ ಸ್ವಚ್ಛಗೊಳಿಸಿ ಎಲ್ಲಾ ಸರಿಯಿದೆಯೇ ಎಂದು ಸುತ್ತಲು ಕಣ್ಣುಹಾಯಿಸುತ್ತಾನೆ. ಇದ್ದಕ್ಕಿದ್ದಂತೆ ತಲೆಗೆ ಏನೋ ಹೊಳೆದವನಂತೆ ಹೋಗಿ ಸುತ್ತಲೂ ಹುಡುಕಿ ತ್ರಿಕೋನಾಕಾರದ ಐದು ಕಲ್ಲುಗಳನ್ನು ತಂದು ಮರದ ಬುಡದಲ್ಲಿ ಜೋಡಿಸುತ್ತಾನೆ. ತಾನು ಈ ಹಿಂದೆ ಬಾಟಲಿಗಳನ್ನು ಒಟ್ಟು ಮಾಡುತ್ತಿದ್ದಾಗ ಒಂದು ನೀರಿರುವ ಬಾಟಲಿಯನ್ನು ಪಕ್ಕಕ್ಕೆ ಇಟ್ಟಿರುತ್ತಾನೆ. ಆ ಬಾಟಲಿ ತಂದು ನೀರಿನಿಂದ ಮುಖವನ್ನು ತೊಳೆದು, ಒಂದು ಕಡೆ ತನ್ನ ಬೂಟುಗಳನ್ನು ಕಳಚಿ ಆಗ ತಾನೆ ಅವನು ನಿರ್ಮಿಸಿದ ಗುಡಿಯ ಬಳಿ ಬಂದು ಕೈ ಮುಗಿದು ವಿಶ್ರಾಂತಿ ಪಡೆಯಲು ಗುಡಿಯಿಂದು ಸ್ವಲ್ಪ ದೂರದಲ್ಲಿ ಮಲಗುತ್ತಾನೆ. ಸ್ವಚ್ಛ ಮಾಡಿ ದಣಿದುದರಿಂದ ಚೆನ್ನಾಗೇ ನಿದ್ದೆ ಹತ್ತುತ್ತದೆ.

ಸುಮಾರು ಒಂದು ಗಂಟೆಯಾದ ಬಳಿಕ ವಿಶ್ವನಿಗೆ ಎಚ್ಚರವಾಗಿ ತಾನು ದಾರಿ ತಪ್ಪಿದುದರ ನೆನಪಾಗುತ್ತದೆ, ಜೊತೆಗೆ ಹೊಟ್ಟೆ ಹಸಿವು ಬೇರೆ. ಎದ್ದು ತಾನು ಒಟ್ಟಿಗೆ ಮಾಡಿದ ಕೆಲವೊಂದು ಬ್ಯಾಗುಗಳನ್ನು ಗಾಡಿಯ ಎರಡು ಕಡೆ ಹ್ಯಾಂಡಲ್‌ಗಳಿಗೆ ತಗಲಾಕಿ, ಗಾಡಿಯ ಮೇಲೆ ಕೂತು ಮಿಕ್ಕಿದ ಬ್ಯಾಗುಗಳನ್ನು ತನ್ನ ಮುಂದೆ ಇಟ್ಟುಕೊಳ್ಳುತ್ತಾನೆ. ಗಾಡಿಯನ್ನು ಶುರು ಮಾಡುವ ಮುಂಚೆ ಎಣ್ಣೆ ಮರದ ಕಡೆಗೆ ಒಂದು ಬಾರಿ ತಿರುಗಿ ನೋಡುತ್ತಾನೆ. ಪಾರ್ಟಿ ದೆಸೆಯಿಂದ ಅವರು ಆಲದ ಮರಕ್ಕೆ ಎಣ್ಣೆ ಮರ ಎಂದು ನಾಮಕರಣ ಮಾಡಿದುದು ನೆನಪಾಗಿ ಒಳಗೊಳಗೆ ನಗು ಬರುತ್ತದೆ. ಅವನು ಸ್ವಚ್ಛಗೊಳಿಸಿದ ಬಳಿಕ 'ಎಣ್ಣೆ ಮರ' 'ಆಲದ ಮರವಾಗಿ' ಮಾರ್ಪಟ್ಟಿದ್ದನ್ನು ಕಂಡು ಅವನಿಗೆ ಒಂದು ರೀತಿಯ ಖುಷಿಯಾಗುತ್ತದೆ. ಅದು ಎಂತಹ ಖುಷಿಯೆಂದರೆ, ತಪ್ಪಿತಸ್ಥನಾಗಿ ತಾಯಿ ಮುಂದೆ ತಲೆ ಬಾಗಿ ನಿಂತಾಗ ಅವಳು ಕ್ಷಮಿಸಿದಾಗ ಆಗುವಂತಹ ಖುಷಿ, 'ಹೋ, ಪ್ರಕೃತಿದೇವಿ ನನ್ನನ್ನು ಕ್ಷಮಿಸೇಬಿಟ್ಟಳು' ಎಂಬ ಭಾವನೆಯಿಂದ ಗಾಡಿ ಶುರು ಮಾಡಿ ಬಂದ ದಾರಿಯಲ್ಲೇ ಹೊರಡುತ್ತಾನೆ. ಆದರೆ ಅವನನ್ನು ಬೀಳ್ಕೊಡುವಾಗ ಅಂತಹುದೊಂದು ಖುಷಿ ಪ್ರಕೃತಿದೇವಿಯ ಮುಖದಲ್ಲೂ ಇರುತ್ತದೆ. ಆದರೆ ಅದು ಕಾಣುವಂಥದ್ದಲ್ಲ, ಮಾತಿನಲ್ಲಿ ಹೇಳುವಂಥದ್ದಲ್ಲ, ಪದಗಳ ವರ್ಣನೆಗೂ ಸಿಗುವಂಥದ್ದಲ್ಲ. ಇವೆಲ್ಲವನ್ನೂ ಮೀರಿದ ಖುಷಿ.

ಪ್ರತಿಕ್ರಿಯಿಸಿ: **feedback@sudha.co.in**